

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ತುಂಗಾ ಪಾನ ಗಂಗಾ ಸ್ನಾನ....

'ತುಂಗಾ ಪಾನ ಗಂಗಾ ಸ್ನಾನ' ಎಂಬ ಗಾದೆ ಮಾತಿನ ಸತ್ಯವನ್ನು ವಿದ್ಯಾರ್ಥಿದೆಶೆಯಲ್ಲಿ ಅನುಭವಿಸಿದ ಸೌಭಾಗ್ಯ ನಮ್ಮದು. ಗಂಗಾ-ಕಾವೇರಿ ನದಿಗಳ ಜೋಡಣೆಯ ಯೋಜನೆ ಇನ್ನೂ ಆಗಿಲ್ಲ. ಆದರೆ ನಮ್ಮ ಕನ್ನಡದ ಈ ಗಾದೆ ಮಾತ್ರ ತುಂಗೆ ಮತ್ತು ಗಂಗೆಯನ್ನು ಎಂದೋ ತನ್ನ ನುಡಿಗಟ್ಟಿನಲ್ಲಿ ತುಂಬಾ ಅರ್ಥಪೂರ್ಣವಾಗಿ ಒಂದುಗೂಡಿಸಿದೆ. ತುಂಗಾ ನದಿಯ ನೀರಿನ ಸವಿ ಬೇರಾವ ನದಿಗಳ ನೀರಿನಲ್ಲಿಯೂ ಇಲ್ಲವೆಂಬುದು ಆ ನದಿಯ ನೀರನ್ನು ಕುಡಿದವರಿಗೆ ಮಾತ್ರ ಗೊತ್ತು. ಬಾಲ್ಯದಲ್ಲಿ ಆಸ್ವಾದಿಸಿದ ಈ ನೀರಿನ ಸವಿಯು ನಂತರದ ನಮ್ಮ ಓದಿನ ದಿನಗಳಲ್ಲಿ ಕುಡಿದ ಮೈಸೂರಿನ ಕಾವೇರಿ, ಕಾಶಿಯ ಗಂಗೆ ಮತ್ತು ವಿಯೆನ್ನಾದ ಡೊನಾವ್ (Donau = Danub) ನದಿಗಳ ನೀರಿನಲ್ಲಿ ಕೊಂಚಮಟ್ಟಿಗೆ ಕಡಿಮೆಯಾದರೂ ಬಯಲು ಸೀಮೆಯ ಹಳ್ಳಿ ಸಿರಿಗೆರೆಗೆ ಬಂದು ನೆಲೆಸಿದ ಮೇಲೆ ಉಂಟಾದ ಕೆರೆಕಟ್ಟೆಯ ಉಪ್ಪುನೀರು ಕುಡಿಯಬೇಕಾದ ಸಂಕಟ ಅಷ್ಟಿಷ್ಟಲ್ಲ. ಕಾರ್ಯಕ್ರಮಗಳಿಗೆಂದು ಶಿವಮೊಗ್ಗೆಗೆ ಹೋದಾಗಲೆಲ್ಲಾ ಶಿಷ್ಯರ ಮನೆಯಿಂದ ತುಂಗೆಯ ನೀರನ್ನು ತಂಬಿಗೆಯಲ್ಲಿ ತುಂಬಿಸಿಕೊಂಡು ಬಾರದ ದಿನಗಳಿಲ್ಲ. 'Amongst all the drinks, water is the best drink' ಎಂಬ ಮಾತೊಂದು ಆಂಗ್ಲಭಾಷೆಯಲ್ಲಿದೆ. 'ಎಲ್ಲಾ ಪಾನೀಯಗಳಲ್ಲಿ ನೀರು ಅತ್ಯುತ್ತಮವಾದ ಪಾನೀಯ'. ನೀರನ್ನು ಬಣ್ಣಿಸುವ ಈ ಮಾತಿನ ಹಿಂದಿರುವ ಅರಿವು ಮದಿರೆಯನ್ನು ಸೇವಿಸುವ ಪಾಶ್ಚಾತ್ಯ ಜನರಿಗೆ ಇರುವಂತೆ ಮತಿಗೆಟ್ಟ ನಮ್ಮ ಜನರಿಗೆ ಇಲ್ಲದಿರುವುದು ಖೇದಕರ. ಅವರ ಈ ಕೆಟ್ಟ ನಡವಳಿಕೆಯಿಂದ ನಿತ್ಯವೂ ಕಂಠಪೂರ್ತಿ ಕುಡಿದು ಗಟಾರಕ್ಕೆ ಬೀಳುತ್ತಿರುವವರು ಅವರಲ್ಲ, ಬೀಳುತ್ತಿರುವುದು ನಮ್ಮ ದೇಶದ ಸಂಸ್ಕೃತಿ ಎಂಬುದು ಅವರಿಗೆ ತಿಳಿಯದಿರುವುದು ಇನ್ನೂ ಖೇದಕರ. "Nothing like home after the bar and restaurants are closed". ಮಧ್ಯರಾತ್ರಿಯಲ್ಲಿ ಬಾರ್ ಅಂಡ್ ರೆಸ್ಟೋರೆಂಟ್‌ಗಳ ಬಾಗಿಲು ಮುಚ್ಚಿದ ಮೇಲೆ ಮನೆಯಂಥ ಸ್ವರ್ಗ ಮತ್ತೊಂದಿಲ್ಲ ಎನ್ನುತ್ತಾರೆ ಪಾಶ್ಚಾತ್ಯರು. ಔತಣಕೂಟದಲ್ಲಿ ಬಲವಂತಪಡಿಸಿದರೆ ಮನೆಗೆ ಹೋಗಲು ತಾನು ಕಾರ್ ಡ್ರೈವ್ ಮಾಡಬೇಕಾಗಿದೆ, ಬೇಡ ಎಂದು ಸೌಜನ್ಯದಿಂದ ನಿರಾಕರಿಸುತ್ತಾರೆ. ಆದರೆ ನಮ್ಮಲ್ಲಿ ಕುಡಿದು ಗಟಾರದಲ್ಲಿ ಬಿದ್ದ ಗಂಡನನ್ನು ಮರ್ಯಾದೆಗೆ ಅಂಜಿ ಮನೆಗೆ ಎತ್ತಿಕೊಂಡು ಹೋಗಬೇಕಾದ ಭಾರತೀಯ ಮಹಿಳೆಯರ ನರಕಯಾತನೆ ಕುಡುಕರಿಗೆ ಹೇಗೆ ತಿಳಿಯಬೇಕು? ಅಂತಹ ಅವಿವೇಕಿ ಗಂಡ ನೆಗೆದು ಬಿದ್ದು ಹೋಗಲಿ ಎಂದರೆ ಅವಳ ತಾಳಿಯ ಗತಿ ಏನು? ಸದ್ಯ ಬಾಟಲಿಯನ್ನು ಕೈಯಲ್ಲಿ ಹಿಡಿದು ತೂರಾಡುತ್ತಾ ಕಣ್ಣು ಕೆಂಪಗೆ ಮಾಡಿ ಹೂಂಕರಿಸುತ್ತಾ ಹೆಂಡತಿಯನ್ನು ಕುಡಿಯಲು ಬಲವಂತಪಡಿಸದಿದ್ದರೆ ಸಮಾಧಾನಪಟ್ಟುಕೊಳ್ಳಬೇಕು.

'We never know the worth of water till the well is dry' (ಬಾವಿ ಬತ್ತುವವರೆಗೂ ನೀರಿನ ಮಹತ್ವವೇನೆಂಬುದು ನಮಗೆ ತಿಳಿಯುವುದಿಲ್ಲ). ಇದು ಗೊತ್ತಿದ್ದರೂ ಹಳ್ಳಿಯ ಜನರು ಕುಡಿಯುವ ನೀರನ್ನು ಬಹಳವಾಗಿ ಪೋಲು ಮಾಡುತ್ತಾರೆ. ಓಣಿಗಳಲ್ಲಿರುವ ನಲ್ಲಿ ಮುರಿದು ಕೊಳವೆಯಿಂದ ನೀರು ಅಡೆತಡೆ ಇಲ್ಲದೆ ಹರಿದು ರೊಚ್ಚಿಗೆ ಸೇರುವುದು ಹಳ್ಳಿಗಳಲ್ಲಿ ಕಾಣುವ ಸಾಮಾನ್ಯ ದೃಶ್ಯ. ಯಾರೂ ಅದರ ಕಡೆ ಕಣ್ಣೆತ್ತಿಯೂ ನೋಡುವುದಿಲ್ಲ. ಪಕ್ಕದಲ್ಲೇ ಹೋಗುತ್ತಿದ್ದರೂ ಯಾರೂ ಅಪವ್ಯಯವಾಗದಂತೆ ನಿಲ್ಲಿಸಲು ಪ್ರಯತ್ನಿಸುವುದಿಲ್ಲ. ಇದಕ್ಕೆ ಕಾರಣ ಖರೀದಿಯ ವಸ್ತುವಾಗದ ನೀರಿನ ಬಗ್ಗೆ ಜನರಿಗಿರುವ ಅಸಡ್ಡೆ. ಅದೇ ನಲ್ಲಿಯಲ್ಲಿ ನೀರಿನ ಬದಲು ಸೀಮೆ ಎಣ್ಣೆಯೋ, ಶೇಂಗಾ ಎಣ್ಣೆಯೋ, ಪೆಟ್ರೋಲೋ, ಡೀಸೆಲ್ಲೋ ಬರುತ್ತಿದ್ದರೆ....!

ಒಂದೊಂದು ನದಿಯ ನೀರಿನ ರುಚಿ ಒಂದೊಂದು ತೆರನಾಗಿರುತ್ತದೆ. ಯಾವ ನದಿಯ ನೀರು ಹೆಚ್ಚು ರುಚಿಯಾಗಿದೆ ಎಂಬುದನ್ನು ಸುಲಭವಾಗಿ ನಾಲಿಗೆ ಹೇಳಬಲ್ಲುದು – ಕುಡಿತದ ಅಮಲಿನಿಂದ ನಾಲಿಗೆ ಕೆಟ್ಟಿಲ್ಲದಿದ್ದರೆ! ಅದೇನೇ ಇರಲಿ, ನಾಲಿಗೆಯ ಸವಿಯಿಂದ ತುಂಗೆಯ ನೀರಿನ ರುಚಿಯ ಗುಣಗಾನ ಮಾಡಿದಂತೆ, ಗಂಗೆಯ ನೀರು ಸ್ನಾನಕ್ಕೆ ಎಲ್ಲ ನದಿಗಳಿಗಿಂತಲೂ ಶ್ರೇಷ್ಠ ಎಂದು ಹೇಳುವುದಕ್ಕೆ ಇರುವ ಮಾನದಂಡ ಯಾವುದು? ಯಾವುದೇ ನದಿಯಲ್ಲಿ ಸ್ನಾನ ಮಾಡಿದರೂ ಮೈಗೆ ಆಹ್ಲಾದಕರ ಅನುಭವ ಉಂಟಾಗುತ್ತದೆಯಲ್ಲವೇ? ಯಾವುದೇ ತೀರ್ಥ ಕ್ಷೇತ್ರದ

ನದಿ ಕೊಳಗಳಲ್ಲಿ ಮಿಂದರೂ ಭಕ್ತರ ಮನಸ್ಸಿನಲ್ಲಿ ಧನ್ಯತೆಯ ಭಾವ ಮೂಡುತ್ತದೆಯಲ್ಲವೇ? ಹೀಗಿರುವಾಗ ಗಂಗಾ ನದಿಯಲ್ಲಿ ಮಾಡುವ ಸ್ನಾನದ ವಿಶೇಷತೆ ಏನು? ಅಂತಹ ಗುಣ ಗಂಗಾನದಿಯ ನೀರಿನಲ್ಲಿ ಏನಿದೆ? ಬಹುಶಃ ಇದಕ್ಕೆ ಉತ್ತರ ಸಿಗುವುದು ಪ್ರಚಲಿತವಾದ ಗಂಗಾವತರಣದ ಕಥಾನಕದಲ್ಲಿ: ಸೂರ್ಯವಂಶದ ರಾಜನಾದ ಸಗರ ಅಶ್ವಮೇಧ ಯಾಗ ಮಾಡುತ್ತಿದ್ದ. ಯಾಗದ ಬಿಳಿಕುದುರೆ ಕಾಣದಾಯಿತು. ಹುಡುಕಲು ತನ್ನ 60 ಸಾವಿರ ಮಕ್ಕಳನ್ನು ಕಳುಹಿಸಿದ. ಕಾಡು ಮೇಡುಗಳನ್ನು ಸುತ್ತಿದ ಅವರಿಗೆ ಕುದುರೆಯನ್ನು ಕಪಿಲ ಮಹರ್ಷಿಯ ಆಶ್ರಮದಲ್ಲಿ ಕಟ್ಟಿ ಹಾಕಿರುವುದು ಕಾಣಿಸಿತು. ಸಗರನ ಮಕ್ಕಳು ಧ್ಯಾನದಲ್ಲಿ ಕುಳಿತಿದ್ದ ಕಪಿಲ ಮಹರ್ಷಿಯನ್ನು ಕಳ್ಳನೆಂದು ತಿಳಿದು ಧಾಳಿ ಮಾಡಿದರು. ಮಹರ್ಷಿ ಕಣ್ತೆರೆದು ತನ್ನ ಯೋಗದ ಬಲದಿಂದ ಅವರೆಲ್ಲರನ್ನೂ ಸುಟ್ಟು ಬೂದಿ ಮಾಡಿದ. ಮಹರ್ಷಿಯ ಶಾಪದಿಂದ ಕೋಸಲ ರಾಜ್ಯ ತತ್ತರಿಸಿಹೋಯಿತು. ಅದೇ ವಂಶದಲ್ಲಿ ಹುಟ್ಟಿ ಬಂದ ಭಗೀರಥ ಬಾಲ್ಯದಲ್ಲಿಯೇ ತನ್ನ ತಂದೆಯನ್ನು ಕಳೆದುಕೊಂಡ. ಪ್ರಬುದ್ಧಮಾನಕ್ಕೆ ಬಂದ ಮೇಲೆ ತನ್ನ ಪೂರ್ವಜರಿಗೆ ಸದ್ಗತಿಯನ್ನು ದೊರಕಿಸುವ ಸಲುವಾಗಿ ಸ್ವರ್ಗದಲ್ಲಿ ಹರಿಯುವ ಪವಿತ್ರ ಗಂಗೆಯನ್ನು ಧರೆಗೆ ತರಲು ಯತ್ನಿಸಿದ. ಸ್ವರ್ಗದಿಂದ ಭೋರ್ಗರೆದು ಬರುವ ತನ್ನ ರಭಸಕ್ಕೆ ಭೂಮಿ ಉಳಿಯುತ್ತದೆಯೇ? ಎಂದು ಗಂಗೆ ಬೀಗುತ್ತಾ ಹೇಳಿದಳು. ಗಂಗೆಯ ಅಹಂಕಾರವನ್ನು ಅಡಗಿಸಲು ಶಿವ ತನ್ನ ತಲೆಗೂದಲು ಕೆದರಿ ಧರೆಯ ಮೇಲೆ ನಿಂತು ಗಂಗೆಯನ್ನು ಹೆಡೆಮುರಿ ಕಟ್ಟಿ ತನ್ನ ಮುಡಿಯಲ್ಲಿ ಅಡಗಿಸಿಕೊಂಡ. ನಂತರ ಭಗೀರಥನ ಪ್ರಾರ್ಥನೆಗೆ ಮನ್ನಿಸಿ ಗಂಗೆಯನ್ನು ಮುಡಿಯಿಂದ ನಿಧಾನವಾಗಿ ಹರಿಯ ಬಿಟ್ಟ. ಧರೆಗಿಳಿದ ಪಾವನ ಗಂಗೆ ಸಗರನ ಸತ್ತ ಮಕ್ಕಳ ಚಿತಾಭಸ್ಮದ ಮೇಲೆ ಹರಿದ ಪರಿಣಾಮವಾಗಿ ಅವರೆಲ್ಲರಿಗೂ ಸದ್ಗತಿ ದೊರೆಯಿತು. ಈ ಪೌರಾಣಿಕ ಕಥೆಯ ಹಿನ್ನೆಲೆಯಲ್ಲಿ ಗಂಗಾನದಿಯಲ್ಲಿ ಸ್ನಾನ ಮಾಡಿದವರಿಗೆ ಮುಕ್ತಿ ದೊರೆಯುತ್ತದೆಯೆಂಬ ಭಾವನೆ ಹಿಂದೂಗಳ ಮನಸಿನಲ್ಲಿ ಮೂಡಿದೆ. ಆದಕಾರಣ ಜೀವನದಲ್ಲಿ ಒಮ್ಮೆಯಾದರೂ ಕಾಶಿಗೆ ತೀರ್ಥಯಾತ್ರೆ ಹೋಗಿ ಗಂಗೆಯಲ್ಲಿ ಮಿಂದು ಕಾಶೀವಿಶ್ವನಾಥನ ದರ್ಶನ ಮಾಡಬೇಕೆಂದು ಶ್ರದ್ಧಾಭಕ್ತಿಯುಳ್ಳ ಜನ ಹಂಬಲಿಸುತ್ತಾರೆ. ಇದು ವಿಶೇಷವಾಗಿ ವಯಸ್ಸಾದ ಸಂಪ್ರದಾಯಸ್ಥ ಅಜ್ಜ-ಅಜ್ಜಿಯರ ಹಂಬಲವಾದರೆ, ವಯಸ್ಸಿಗೆ ಬಂದ ಮೊಮ್ಮಗ್ಗಳ ಹಂಬಲವೇ ಬೇರೆ, ಮಧ್ಯವಯಸ್ಸಿನ ತಂದೆ-ತಾಯಿಗಳ ಹಂಬಲವೇ ಬೇರೆ. ಚೂಡಿದಾರ ಪೈಜಾಮಕ್ಕೆ ಮಾರುಹೋದ ಹುಡುಗಿಗೆ ಮದುವೆಯಾದ ಮಾರನೆಯ ದಿನವೇ ಸಾಫ್ಟ್‌ವೇರ್ ಗಂಡನೊಂದಿಗೆ ಅಮೇರಿಕೆಗೆ ಹಾರಿ ಹೋಗುವ ಹಂಬಲವಿದ್ದರೆ, ಸಾಂಪ್ರದಾಯಿಕವಾಗಿ ಆಕೆಗೆ ಬನಾರಸ್ ಸೀರೆಯನ್ನುಡಿಸಿ ಹಸೆಮಣೆಯ ಮೇಲೆ ಕೂರಿಸಿ ಹಣೆಗೆ ಎಂದೂ ಅಳಿಸದ ಕುಂಕುಮವನ್ನಿಡುವ ಹಂಬಲ ತಂದೆತಾಯಿಗಳಿಗೆ. ಇದು ಮದುವೆ ಮಂಟಪದಿಂದ ಮುನಿಸಿಕೊಂಡು ಕಾಶೀಯಾತ್ರೆ ಹೊರಟ ಮದುಮಗನ ಮನವೊಲಿಸಿ ಸಪ್ತಪದಿ ತುಳಿಯುವಂತೆ ಮಾಡುವ ತಂತ್ರಗಾರಿಕೆಯೋ ಏನೋ! ಕಾಶಿಯಿಂದಲೇ ಬಂದ ಮನಮೋಹಕ ಸೀರೆಯನ್ನುಟ್ಟ ಮದುಮಗಳ ವಾರೆ ನೋಟಕ್ಕೆ ಅಳಿಯ ಮನಸೋಲದೇ ಇರುತ್ತಾನೆಯೇ!

ಗಂಗಾನದಿಯ ನೀರನ್ನು ಹಿಂದೂಗಳು ಪವಿತ್ರಭಾವನೆಯಿಂದ 'ಗಂಗಾಜಲ'ವೆಂದೇ ಗೌರವಿಸುತ್ತಾರೆ. ಯಾವುದೇ ಭಾಷೆಯ ಶಬ್ದಗಳಿಗೆ ವ್ಯಕ್ತಿಗೆ ಇರುವಂತೆ ಆಯಾಯ ಭಾಷೆಯ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ತಮ್ಮದೇ ಆದ ವಿಶಿಷ್ಟವಾದ ಮರ್ಯಾದೆ, ಗೌರವ ಇರುತ್ತದೆ. 'ಗಂಗಾಜಲ' ಎಂಬ ಪದದ ಶಾಬ್ದಿಕ ಅರ್ಥ 'ಗಂಗೆಯ ನೀರು' ಎಂದಿದ್ದರೂ, ಅದರ ಹಿಂದೆ ಕಣ್ಣಿಗೆ ಕಾಣಿಸದ, ಕಿವಿಗೆ ಕೇಳಿಸದ, ಶ್ರದ್ಧಾಳುಗಳ ಹೃದಯಕ್ಕೆ ಮಾತ್ರ ಗೋಚರಿಸುವ ಭಾವನಾತ್ಮಕ ಅರ್ಥವೇ ಬೇರೊಂದಿದೆ. 'ಕಾವೇರಿಜಲ, ಕಪಿನಿಜಲ, ಕೃಷ್ಣಾಜಲ....' ಎಂಬ ಶಬ್ದಗಳಲ್ಲಿ ಹೊರಹೊಮ್ಮದೇ ಇರುವ ಭಾವವೊಂದು 'ಗಂಗಾಜಲ' ಎಂಬ ಶಬ್ದದಲ್ಲಿ ಅಡಗಿರುವುದು ಅನುಭವಕ್ಕೆ ಬರುತ್ತದೆ. 'ಜಲವೊಂದೇ ಶೌಚಾಚಮನಕ್ಕೆ' ಎನ್ನುವ ಬಸವಣ್ಣನವರ ಮಾತು ಇಲ್ಲಿ ಅನ್ವಯಿಸುವುದಿಲ್ಲ. ಅದರ ಸ್ತರವೇ ಬೇರೆ. ಶೌಚಕ್ರಿಯೆ ಮತ್ತು ಆಚಮನಕ್ರಿಯೆಗಳಿಗೆ ಬಳಸುವ ನೀರು ಒಂದೇ ಆಗಿದ್ದರೂ ಒಂದೇ ಎನಿಸುವುದಿಲ್ಲ. ಒಂದೇ ವಸ್ತುವು ವಿಭಿನ್ನ ಕ್ರಿಯೆಗಳಲ್ಲಿ ವಿಭಿನ್ನ ದೃಷ್ಟಿಯನ್ನು ಹೊಂದಿರುತ್ತದೆ. ವಿಭಿನ್ನ ನದಿಗಳಿಂದ ಬಂದ ವಿಭಿನ್ನ ಸ್ವರೂಪದ ನೀರು ಒಂದೇ ಕ್ರಿಯೆಯಲ್ಲಿ ಒಂದೆನಿಸುವ ಸಾಧ್ಯತೆ ಇದೆ. ಮದುವೆ ಮೊದಲಾದ ಮಂಗಳ ಕಾರ್ಯಗಳಲ್ಲಿ ಪಠಿಸುವ ಈ ಕೆಳಗಿನ ಮಂತ್ರದಿಂದ ಒಂದು ಪುಟ್ಟ ಕಲಶದಲ್ಲಿರುವ ಬಾವಿಯ ಅಥವಾ ನಲ್ಲಿಯ ನೀರು ಆಸೇತು ಹಿಮಾಚಲ ಪರ್ಯಂತ ಹರಿಯುವ ಎಲ್ಲ ನದಿಗಳನ್ನೊಳಗೊಂಡ ಪವಿತ್ರ ಜಲವಾಗುತ್ತದೆ.

**ಗಂಗೇ ಚ ಯಮುನೇ ಚೈವ ಗೋದಾವರೀ ಸರಸ್ವತೀ ।**
**ನರ್ಮದಾ-ಸಿಂಧು-ಕಾವೇರೀ ಜಲೇಽಸ್ಮಿನ್ ಸನ್ನಿಧಿಂ ಕುರು ॥**

ಪೂಜೆಗೆ ಬಳಸುವ ಯಾವುದೇ ನದಿಯ ನೀರು 'ಗಂಗಾಜಲ' ಎನಿಸಿಕೊಳ್ಳುತ್ತದೆ. ಹಾಗೇನೆ ಸಾವಿನ ದವಡೆಯಲ್ಲಿರುವ ವ್ಯಕ್ತಿಯ ಬಾಯಿಗೆ ಹಾಕುವ ಯಾವುದೇ ನದಿಯ ನೀರು 'ಗಂಗಾಜಲ' ಎನಿಸಿಕೊಳ್ಳುತ್ತದೆ. ಸಾಯುವ ತಂದೆಯ ಬಾಯಿಗೆ ಮಕ್ಕಳು ನೀರು ಬಿಡುವುದು ಅಪ್ಪನಿಗೆ ಸದ್ಗತಿ ಸಿಗಲೆಂದೋ, ತಜೂರಿಯ ಬೀಗದ ಕೈ ಎಲ್ಲಿದೆಯೆಂದು ಅಪ್ಪನ ಬಾಯಿ ಬಿಡಿಸಲೆಂದೋ ಆ ಮಕ್ಕಳೇ ಬಲ್ಲರು! ಅಂತಹ ಮಕ್ಕಳ ಕಾಟದಿಂದಲೇ ಅಪ್ಪ ಸಾಯುವ ಸ್ಥಿತಿಗೆ ಬಂದಿದ್ದರೂ ಆಶ್ಚರ್ಯವಿಲ್ಲ!

ಹಿಂದೂಗಳ ಪವಿತ್ರ ತೀರ್ಥಕ್ಷೇತ್ರವೆಂದು ಕಾಶೀ ಎಷ್ಟು ಪ್ರಖ್ಯಾತಿಯನ್ನು ಪಡೆದಿದೆಯೋ ಅಷ್ಟೇ ಕುಖ್ಯಾತಿಯನ್ನು ಸಹ ಪಡೆದಿದೆ. ದೊಡ್ಡ ದೊಡ್ಡ ನಗರಗಳಲ್ಲಿ ಶ್ರೀಮಂತರು ತಮ್ಮ ಮನೆಯ ಮುಂದೆ ಗೇಟಿನಲ್ಲಿ 'ನಾಯಿಗಳಿವೆ, ಎಚ್ಚರಿಕೆ...!' ಎಂಬ ಎಚ್ಚರಿಕೆಯ ಮಾತನ್ನು ಬರೆಸಿರುತ್ತಾರೆ. ಕಣ್ಣೆತ್ತಿ ನೋಡಿದಾಗ ಮನೆಯ ಗೋಡೆಯ ಮೇಲೆ ಅವರ ನಾಮಫಲಕವೇ ನಿಚ್ಚಳವಾಗಿ ದೃಷ್ಟಿಗೆ ಬೀಳುವುದರಿಂದ ಮನೆಗೆ ಬರುವವರು ಏನೆಂದು ತಿಳಿದುಕೊಳ್ಳಬೇಕೋ ಅವರವರ ಅನುಭವಕ್ಕೆ ಬಿಟ್ಟ ವಿಚಾರ! ಇಂತಹ ಎಚ್ಚರಿಕೆಯ ಮಾತುಗಳನ್ನು ಕಾಶಿಗೆ ಬರುವ ಪ್ರವಾಸಿಗರಿಗೆ ಹೇಳಿದಂತಿದೆ ಸ್ಥಳೀಯರ ಆಡುಮಾತಿನಲ್ಲಿರುವ ಈ ಮುಂದಿನ ಹಿಂದೀ ಚುಟುಕು: **"ರಾಂಡ್, ಸಾಂಡ್, ಸೀಢೀ, ಸಂನ್ಯಾಸೀ. ಇನ್‌ಸೇ ಬಚೇ ತೋ ಕಾಶೀ"** ಅಂದರೆ ಕಾಶಿಗೆ ಬರುವವರು ಅಲ್ಲಿಯ ಓಣಿಗಳಲ್ಲಿರುವ ಸೂಳೆಯರು, ಗಲ್ಲಿ ಗಲ್ಲಿಗಳಲ್ಲಿರುವ ಗೂಳಿಗಳು, ಗಂಗಾನದಿಯ ಘಾಟ್‌ಗಳಲ್ಲಿರುವ ಎತ್ತರದ ಮೆಟ್ಟಿಲುಗಳು ಮತ್ತು ಅಲ್ಲಿ ಹೊಂಚುಹಾಕುತ್ತಾ ಕುಳಿತು ಪ್ರವಾಸಿಗರಿಗೆ ಪಂಗನಾಮ ಹಾಕುವ ಪಂಡಾಗಳು ಇವರಿಂದ ಬಚಾವಾದರೆ ಪ್ರವಾಸಿಗರ ಪುಣ್ಯ!

ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದಾಗ ಒಬ್ಬ ಮಧ್ಯವಯಸ್ಕ ಚಿಕ್ಕಮಗಳೂರಿನ ಕಾಫೀ ಪ್ಲಾಂಟರ್ ಎಂದು ಹೇಳಿಕೊಂಡು ತನ್ನ ಹೆಂಡತಿಯೊಡನೆ ನಾವಿರುವ ವಿದ್ಯಾರ್ಥಿನಿಲಯಕ್ಕೆ ಬಂದಿದ್ದ. ಕನ್ನಡದಲ್ಲಿ ಮಾತನಾಡುತ್ತಿದ್ದ. ರೈಲಿನಲ್ಲಿ ಪ್ರಯಾಣಿಸುವಾಗ ತನ್ನಲ್ಲಿದ್ದ ಎಲ್ಲ ಹಣ ಪಿಕ್‌ಪಾಕೆಟ್ ಆಗಿದೆಯೆಂದು ಹೇಳಿದ. ವಾಪಾಸ್ ಹೋಗಲು ಪ್ರಯಾಣದ ಖರ್ಚಿಗೆ ನಮ್ಮಿಂದ ಹಣ ಕೇಳಿದ. ಅವನ ಮಾತಿನ ಧಾಟಿಯಿಂದ ನಮಗೆ ನಂಬುಗೆ ಬರಲಿಲ್ಲ. ಕನ್ನಡ ಮಾತನಾಡುತ್ತಿದ್ದುದರಿಂದ ಸಂಶಯಪಡುವುದೂ ಕಷ್ಟವಾಗಿತ್ತು. ವಿದ್ಯಾರ್ಥಿಗಳಾದ ನಮ್ಮಲ್ಲಿ ಅಷ್ಟೊಂದು ಹಣ ಇರಲು ಹೇಗೆ ಸಾಧ್ಯ? ನಿಮ್ಮ ಮನೆಗೆ ಫೋನ್ ಮಾಡಿ ಟೆಲಿಗ್ರಾಂ ಮನಿಯಾರ್ಡರ್ ತರಿಸಿಕೊಳ್ಳಿ. ಅಲ್ಲಿಯವರೆಗೆ ನಮ್ಮ ಹಾಸ್ಟಲ್ ವಾರ್ಡನ್‌ರವರಿಗೆ ಹೇಳಿ ಊಟ-ವಸತಿಯನ್ನು ಕಲ್ಪಿಸಿಕೊಡುವುದಾಗಿ ಹೇಳುತ್ತಿದ್ದಂತೆಯೇ ಅವನು 'ನನ್ನನ್ನು ಕಳ್ಳ, ಸುಳ್ಳ ಎಂದು ತಿಳಿದಿದ್ದೀರಾ, ನಾನು ಭಿಕ್ಷೆ ಬೇಡಲಿಕ್ಕೆ ಬಂದಿಲ್ಲ' ಎಂದು ಜೋರು ಮಾಡತೊಡಗಿದ. 'Yes, you are a cheat' ಎಂದು ತಿರುಗೇಟು ಕೊಡುತ್ತಿದ್ದಂತೆಯೇ ಜಾಗ ಖಾಲಿಮಾಡಿದ. ಅವನನ್ನು ನೋಡುತ್ತಾ ಇರು ಎಂದು ಗೆಳೆಯನೊಬ್ಬನಿಗೆ ಹೇಳಿ, ಕ್ಯಾಂಪಸ್‌ನಲ್ಲಿಯೇ ಬೀಡು ಬಿಟ್ಟಿದ್ದ ಪೋಲೀಸರನ್ನು ಕರೆದುಕೊಂಡು ಬರುವಷ್ಟರಲ್ಲಿಯೇ ಗೆಳೆಯನ ಕಣ್‌ತಪ್ಪಿಸಿ 'ಕಾಫೀ ಪ್ಲಾಂಟರ್' ಕಾಲ್ಕಿತ್ತಿದ್ದ. ಒಮ್ಮೆ ದಿವಂಗತ ಪ್ರಧಾನಿ ಮೊರಾರ್ಜಿ ದೇಸಾಯಿಯವರು ಬಂದಿದ್ದರು. ಅವರು ವಿದ್ಯಾರ್ಥಿಗಳನ್ನು ಕುರಿತು ಭಾಷಣ ಮಾಡುವಾಗ ಉದ್ಧರಿಸಿದ ಸಂಸ್ಕೃತ ಶ್ಲೋಕ ನೆನಪಾಯಿತು:

**ಅನ್ಯಕ್ಷೇತ್ರೇ ಕೃತಂ ಪಾಪಂ ತೀರ್ಥಕ್ಷೇತ್ರೇ ವಿನಷ್ಯತಿ ।**
**ತೀರ್ಥಕ್ಷೇತ್ರೇ ಕೃತಂ ಪಾಪಂ ವಜ್ರಲೇಪಂ ಭವಿಷ್ಯತಿ ॥**

ಅಂದರೆ ಬೇರೆ ಜಾಗದಲ್ಲಿ ಮಾಡಿದ ಪಾಪವು ತೀರ್ಥಕ್ಷೇತ್ರದಲ್ಲಿ ನಾಶವಾಗುತ್ತದೆ. ಆದರೆ ತೀರ್ಥಕ್ಷೇತ್ರದಲ್ಲಿಯೇ ಮಾಡಿದ ಪಾಪವು ವಜ್ರಲೇಪವಾಗಿ ಅಚ್ಚಳಿಯದೆ ಉಳಿದುಬಿಡುತ್ತದೆ.

ಶ್ರದ್ಧಾಳು ಭಕ್ತರಿಗೆ ಗಂಗೆ ಕೇವಲ ಒಂದು ಸಾಮಾನ್ಯ ನದಿಯಾಗಿ ಕಾಣಿಸುವುದಿಲ್ಲ. ಒಬ್ಬ ತಾಯಿಯಾಗಿ ಗೋಚರಿಸುತ್ತಾಳೆ. ರೈಲಿನಲ್ಲೋ, ಬಸ್ಸಿನಲ್ಲೋ, ಕಾರಿನಲ್ಲೋ ಪಯಣಿಸುವಾಗ ನದಿಯ ಸೇತುವೆಯ ಮೇಲೆ ಬರುತ್ತಿದ್ದಂತೆಯೇ 'ಗಂಗಾ ಮೈಯಾ ಕೀ ಜೈ ಹೋ!' ಎಂದು ಜನ ಕೂಗಿ ಕೈ ಮುಗಿದು ನಮಸ್ಕರಿಸುತ್ತಾರೆ. ತಾಯ ಮಡಿಲಲ್ಲಿ ಮಲಗಿದ ಮಗುವಂತೆ ಭಾವುಕರಾಗಿ ಕಣ್ಮುಚ್ಚಿ ತಮ್ಮೆಲ್ಲ ಕಷ್ಟಗಳನ್ನು ಪರಿಹರಿಸಲು ಬೇಡಿಕೊಳ್ಳುತ್ತಾರೆ. ಪೂಜಾರಿಯು ದೇವರಿಗೆ ಮಂಗಳಾರತಿ ಮಾಡಿ ಭಕ್ತರ ಮುಂದೆ ಹಿಡಿದು ಉದ್ಧರಣೆ ಸೌಟಿನಲ್ಲಿ ಕೊಡುವ ಒಂದು ಗುಟುಕು ನೀರು ನೀರಲ್ಲ, ಹಣ್ಣು ಹಣ್ಣಲ್ಲ, ಭಕ್ತರ ಹೃದಯವನ್ನು ತಣಿಸುವ ಪವಿತ್ರ ತೀರ್ಥ-ಪ್ರಸಾದ! ಭಗವಂತನ ದಿವ್ಯಾನುಗ್ರಹ! ಕೈಯಲ್ಲಿದ್ದ ತೀರ್ಥವನ್ನು 'ರುಫ್' ಎಂದು ಬಾಯೊಳಗೆ ಎಳೆದುಕೊಳ್ಳುವಾಗ ಭಕ್ತರ ಮೈ ಪುಳಕಗೊಳ್ಳುತ್ತದೆ. ಕಂಠಪೂರ್ತಿ ಪಾಯಸ ಕುಡಿದಾಗಲೂ ಸಿಗದಷ್ಟು ಸಂತೃಪ್ತಿ ಒಂದು ಗುಟುಕು ತೀರ್ಥದಿಂದ ಸಿಗುತ್ತದೆ, ಪ್ರಸಾದ ರೂಪದಲ್ಲಿ ಸಿಕ್ಕ ಒಂದು ತುಣುಕು ಕಲ್ಲುಸಕ್ಕರೆಯಿಂದ ಸಿಗುತ್ತದೆ. **'ಗುರು ಬಂದ, ಹರ ಬಂದ, ಶಿವ ಬಂದ ಮನೆಗೆ...'** ಎಂದು ಹಾಡಿ ಶಿಷ್ಯ ತನ್ನ ಗುರುವಿನ ಪಾದಗಳನ್ನು ತೊಳೆದು ಮನೆಯ ತುಂಬ ಸಿಂಪಡಿಸುವುದು ಕೊಳೆನೀರಲ್ಲ, ಅದು ಗುರುವಿನ ಪಾದಧೂಳಿಯಿಂದ ತನ್ನ ಮನೆ ಪಾವನವಾಯಿತೆಂಬ ಭಕ್ತಿಭಾವನೆಗಳಿಂದ ಕೂಡಿದ ಪವಿತ್ರ ಪಾದೋದಕ! ಇಗರ್ಜಿಯಲ್ಲಿ ಏಸುಕ್ರಿಸ್ತನ ಶಿಲುಬೆಯ ಮುಂದೆ ಮಂಡಿಯೂರಿ ನಮಸ್ಕರಿಸಿ ಪಾದ್ರಿಯಿಂದ ಪಡೆದ ಒಂದು ತುಂಡು ಬ್ರೆಡ್ ಮತ್ತು ಒಂದು ಗುಟುಕು ವೈನ್ ನಿತ್ಯ ಉಪಯೋಗಿಸುವ ಬೆಳಗಿನ ಉಪಾಹಾರದ ಬ್ರೆಡ್ ಮತ್ತು ವೈನ್ ಅಲ್ಲ. ಅದು ಪ್ರಾರ್ಥನೆಯ ಕೊನೆಯಲ್ಲಿ ಕ್ರೈಸ್ತ ಧರ್ಮೀಯರು ದೇವರ ಅನುಗ್ರಹಕ್ಕಾಗಿ ಪವಿತ್ರ ಭಾವನೆಯಿಂದ ಮಾಡುವ ಧಾರ್ಮಿಕ ವಿಧಿ 'Holy Communion'!

ಭಾವಸಂಪನ್ನ ಓದುಗರೇ! ಗಂಗಾ ನದಿಯ ದಂಡೆಯಲ್ಲಿ ಪೂರ್ವಾಭಿಮುಖವಾಗಿ ಅರೆಬೆತ್ತಲಾಗಿ ನಿಂತು **'ಓಂ ತತ್ ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ...'** ಎನ್ನುತ್ತಾ ಕಣ್ಮುಚ್ಚಿ ಸುತ್ತಣ ಪರಿಸರದ ಪರಿವೆಯೇ ಇಲ್ಲದೆ ಮೂಗು ಹಿಡಿದು ಮುಳುಗಿ ಏಳುವ ಭಕ್ತನ ಹೃದಯದಲ್ಲಿರುವ ಭಾವನೆಗಳು ಅದೇ ನದಿಯಲ್ಲಿ ದೋಣಿಯೊಳಗೆ

ಕುಳಿತು ವಿಹರಿಸುವ ವಿದೇಶೀ ಪ್ರವಾಸಿಗನ ಕಣ್ಣುಗಳಿಗೆ ಗೋಚರಿಸುವುದಿಲ್ಲ. ಇನ್ನು ಅವನ ಕೈಯಲ್ಲಿರುವ ಕ್ಯಾಮರಾ ಆ ಭಾವನೆಗಳನ್ನು ಸೆರೆ ಹಿಡಿಯಲು ಸಾಧ್ಯವೇ? ಆ ಪೂಜಾರಿಯದೂ ಅಷ್ಟೆ. ಭಕ್ತರು ಮಂಗಳಾರತಿ ತಟ್ಟೆಗೆ ಹಾಕುವ ಕಾಣಿಕೆಯ ಮೇಲೆಯೇ ಅವನ ಕಣ್ಣು. ಭಕ್ತರ ಮುಖದಲ್ಲಿ ಕಂಗೊಳಿಸುವ ಧನ್ಯತೆಯ ಭಾವದ ಕಡೆ ಅವನ ಗಮನ ಇರುವುದಿಲ್ಲ. ಅವನ ಮುಖ ಅರಳುವುದು ತಟ್ಟೆಯಲ್ಲಿ ಹೆಚ್ಚಿನ ಕಾಣಿಕೆ ಬಿದ್ದಾಗ ಅಲ್ಲವೇ? 'ಎನಿಸು ಕಾಲ ಕಲ್ಲು ನೀರೊಳಗಿದ್ದು ಫಲವೇನು, ನೆನೆದು ಮೃದುವಾಗಬಲ್ಲುದೇ? ಎನಿಸು ಕಾಲ ನಿಮ್ಮ ಪೂಜಿಸಿ ಏವೆನಯ್ಯಾ ಮನದಲ್ಲಿ ದೃಢವಿಲ್ಲದನ್ನಕ್ಕ...?'

**25.3.2008**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑